National
Kannada
23.08.2025: 1935hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು:</u>

1. ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ; ಪ್ರಧಾನಿ ಸೇರಿದಂತೆ ಗಣ್ಯರಿಂದ ಶುಭಾಶಯ; ಬೆಂಗಳೂರಿನಲ್ಲೂ ವಿಶೇಷ ಕಾರ್ಯಕ್ರಮ
2. ರೈತರಿಗೆ ತಮ್ಮ ಬೆಳೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಯೋಜಿಸಲು ಜಿಯೋ ಪೋರ್ಟಲ್ ಸಹಕಾರಿ
3. ಆಗಸ್ಟ್ ೨೫ರಿಂದ ಅಮೆರಿಕಾಕ್ಕೆ ಅಂಚೆ ವಸ್ತುಗಳ ಸಾಗಾಣೆ ತಾತ್ಕಾಲಿಕ ಸ್ಥಗಿತ
4. ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್; ಚಿನ್ನದ ಪದಕ ಗೆದ್ದ ಅರ್ಜುನ್ - ಎಲವೆನಿಲ್ ಜೋಡಿ

******

೧೪೦ ಕೋಟಿ ನಾಗರೀಕರ ಕೌಶಲ್ಯದಿಂದ ಭಾರತವು ಬಾಹ್ಯಾಕಾಶ ಜಗತ್ತಿನಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಅವರು, ಮುಂಬರುವ ವರ್ಷಗಳಲ್ಲಿ ದೇಶವು ಬಾಹ್ಯಾಕಾಶ ಕ್ಷೇತ್ರದಲ್ಲಿ ಇನ್ನಷ್ಟು ಹೆಚ್ಚಿನ ಸಾಧನೆ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸರ್ಕಾರವು ಈ ವಲಯದಲ್ಲಿ ವಿವಿಧ ಸುಧಾರಣೆಗಳನ್ನು ತಂದಿದ್ದು, ಇದು ಯುವಕರು, ಖಾಸಗಿ ವಲಯ ಮತ್ತು ನವೋದ್ಯಮಗಳ ಹೊಸ ಅನ್ವೇಷಣೆ ಮತ್ತು ಭಾರತದ ಬಾಹ್ಯಾಕಾಶ ಪ್ರಯಾಣಕ್ಕೆ ಅರ್ಥಪೂರ್ಣವಾಗಿ ಕೊಡುಗೆ ನೀಡಲು ಪ್ರೋತ್ಸಾಹಿಸಿದೆ ಎಂದು ಪ್ರಧಾನಿ ಹೇಳಿದರು.

******

ಬಾಹ್ಯಾಕಾಶ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ಮುಕ್ತಗೊಳಿಸಿರುವುದು ಕಳೆದ ೧೧ ವರ್ಷಗಳಲ್ಲಿ ಮಾಡಿದ ಅತ್ಯಂತ ದೊಡ್ಡ ಸುಧಾರಣೆಯಾಗಿದೆ ಎಂದು ಬಾಹ್ಯಾಕಾಶ ಖಾತೆ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ೨ನೇ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸುಧಾರಣೆ, ಸಾಧನೆ ಮತ್ತು ಪರಿವರ್ತನೆ ಎಂಬ ಮಂತ್ರದೊಂದಿಗೆ ಬಾಹ್ಯಾಕಾಶ ಕ್ಷೇತ್ರವು ಮುಂದುವರಿಯುತ್ತಿದೆ ಎಂದು ತಿಳಿಸಿದರು. ಆಪರೇಷನ್ ಸಿಂಧೂರ್ ಸಮಯದಲ್ಲಿಯೂ ಸಹ, ಜಗತ್ತು ಭಾರತದ ಬಾಹ್ಯಾಕಾಶ ಮತ್ತು ತಂತ್ರಜ್ಞಾನ ಸಾಮರ್ಥ್ಯಗಳನ್ನು ಕಂಡಿತು. ಎರಡು ವರ್ಷಗಳ ಹಿಂದೆ, ಭಾರತದ ಚಂದ್ರಯಾನ ಮಿಷನ್ ಚಂದ್ರನ ದಕ್ಷಿಣ ಧ್ರುವದ ಮೇಲೆ ಇಳಿಯುವ ಮೂಲಕ ಸಾಧನೆಗೈದ ಮೊದಲ ದೇಶವಾಗಿ ಹೊರಹೊಮ್ಮಿತು ಎಂದು ಅವರು ಹೇಳಿದರು. ಇದೆ ವೇಳೆ ಇಸ್ರೋ ಅಧ್ಯಕ್ಷ ಡಾ. ವಿ. ನಾರಾಯಣನ್ ಮಾತನಾಡಿ, ೨೦೪೦ರ ವೇಳೆಗೆ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮವು ವಿಶ್ವದ ಯಾವುದೇ ಇತರ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಸಮನಾಗಿರುತ್ತದೆ ಎಂದು ಹೇಳಿದರು. ಚಂದ್ರಯಾನ-೪ ಮಿಷನ್ ಮತ್ತು ವೀನಸ್ ಆರ್ಬಿಟರ್ ಮಿಷನ್‌ನಂತೆ ಒಂದೊಂದಾಗಿ ಕಾರ್ಯಾಚರಣೆಗಳನ್ನು ನಿಗದಿಪಡಿಸಲಾಗಿದೆ. ೨೦೩೫ ರ ವೇಳೆಗೆ ಭಾರತವು

ಭಾರತೀಯ ಅಂಟ್ರಿಕ್ಸ್ ಸ್ಟೇಷನ್ ಎಂಬ ಬಾಹ್ಯಾಕಾಶ ನಿಲ್ದಾಣವನ್ನು ಹೊಂದಲಿದೆ ಎಂದು ಡಾ. ನಾರಾಯಣನ್ ಮಾಹಿತಿ ನೀಡಿದರು. ನವದೆಹಲಿಯ ನೆಹರು ತಾರಾಲಯದಲ್ಲಿ ಆರ್ಯಭಟ ಗ್ಯಾಲರಿಯನ್ನು ಉದ್ಘಾಟಿಸಿ ಮಾತನಾಡಿದ ಗಗನಯಾತ್ರಿ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಭಾರತಕ್ಕೆ ಇದು ಸುವರ್ಣ ಸಮಯ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಯುವ ಪೀಳಿಗೆಯ ಕನಸನ್ನು ಸಾಧಿಸಲು ಪ್ರೋತ್ಸಾಹಿಸುವ ಜೊತೆಗೆ ರಾಷ್ಟ್ರದ ಮಹತ್ವಾಕಾಂಕ್ಷೆಯ ಕನಸುಗಳನ್ನು ವಾಸ್ತವಕ್ಕೆ ತಿರುಗಿಸಲು ಇದು ಸಹಾಯ ಮಾಡುತ್ತದೆ ಎಂದರು.

********

ಚಂದ್ರಯಾನ-೩ ಮಿಷನ್ ಯಶಸ್ವಿಯಾಗಲು ಕಾರಣರಾದ ಬಾಹ್ಯಾಕಾಶ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಷ್ಟ್ರೀಯ ಬಾಹ್ಯಾಕಾಶ ದಿನವಾದ ಇಂದು ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಅವರು, ಚಂದ್ರಯಾನ-೩ ಮಿಷನ್ ಬಾಹ್ಯಾಕಾಶ ಪರಿಶೋಧನೆಯಲ್ಲಿ ಹೊಸ ಗಡಿಗಳನ್ನು ತೆರೆದಿದೆ ಮತ್ತು ರಾಷ್ಟ್ರದ ಯುವಕರಲ್ಲಿ ನಾವೀನ್ಯತೆ ಮತ್ತು ನವೀಕೃತ ಮನೋಭಾವವನ್ನು ಹುಟ್ಟುಹಾಕಿದೆ ಎಂದು ಹೇಳಿದ್ದಾರೆ. ಭಾರತದ ಆಕಾಂಕ್ಷೆಗಳನ್ನು ವಾಸ್ತವಕ್ಕೆ ತಿರುಗಿಸಲು ಇಸ್ರೋ, ಚಂದ್ರಯಾನ-೩ ಮತ್ತು ಆದಿತ್ಯದಂತಹ ಕಾರ್ಯಾಚರಣೆಗಳನ್ನು ಮುಂದುವರಿಸುತ್ತದೆ ಎಂದು ಗೃಹ ಸಚಿವರು ಹೇಳಿದರು.

********

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ, ಬರ, ಮಳೆ, ಹವಾಮಾನ ಮುಂತಾದ ನಿಖರವಾದ ಮಾಹಿತಿಯನ್ನು ಒದಗಿಸುವ ಜಿಯೋ ಪೋರ್ಟಲ್‌ಅನ್ನು ಅಭಿವೃದ್ಧಿಪಡಿಸಿದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಹೇಳಿದ್ದಾರೆ. ನವದೆಹಲಿಯಲ್ಲಿ ವರ್ಚುವಲ್ ಮೂಲಕ ನಡೆದ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಪೋರ್ಟಲ್ ರೈತರಿಗೆ ತಮ್ಮ ಬೆಳೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಯೋಜಿಸಲು ಸಹಾಯ ಮಾಡುತ್ತದೆ. ಉಪಗ್ರಹ ಆಧಾರಿತ ವ್ಯವಸ್ಥೆಯನ್ನು ವಿವರಿಸಿದ ಸಚಿವರು, ಸರ್ಕಾರವು ಈಗ ಬೆಳೆ ನಷ್ಟಗಳ ಕುರಿತಂತೆ ನಿಖರ ಮಾಹಿತಿಯನ್ನು ಪಡೆಯುತ್ತಿದೆ. ಈ ತಂತ್ರಜ್ಞಾನ ಫಸಲ್ ಬಿಮಾ ಯೋಜನೆಯಡಿ ರೈತರಿಗೆ ನಿಖರ ಪರಿಹಾರವನ್ನು ಒದಗಿಸಲಿದೆ ಎಂದು ಹೇಳಿದರು.

********

ಬೆಂಗಳೂರಿನ ಜವಾಹರ್‌ಲಾಲ್ ನೆಹರೂ ತಾರಾಲಯದ ವತಿಯಿಂದ ಬಾಹ್ಯಾಕಾಶ ದಿನಾಚರಣೆ ಅಂಗವಾಗಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶಾಲಾ ಮಕ್ಕಳಿಗಾಗಿ, ಚಿತ್ರಕಲಾ ಸ್ಪರ್ಧೆ, ಆಶುಭಾಷಣ, ಆರ್ಯಭಟ ಮಾದರಿ ತಯಾರಿಕೆ, ರಸಪ್ರಶ್ನೆ ಮತ್ತು ಜಿಗ್ಸಾ ಪಜಲ್ ಚಟುವಟಿಕೆ ಆಯೋಜಿಸಲಾಗಿತ್ತು. ಚಂದ್ರನ ಕುರಿತ ಪ್ರದರ್ಶನ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ ಕೂಡ ಏರ್ಪಡಿಸಲಾಗಿತ್ತು. 'ಚಂದ್ರಯಾನ ಮಿಷನ್‌ನ ಯಶಸ್ಸಿನ ಕುರಿತು ಜವಾಹರ್‌ಲಾಲ್ ನೆಹರೂ ತಾರಾಲಯದ ನಿರ್ದೇಶಕ ಡಾ. ಬಿ.ಆರ್.ಗುರುಪ್ರಸಾದ್ ಮಾತನಾಡಿ ಇದು ಭಾರತ ದೇಶದ ಅವಿಸ್ಮರಣೀಯ ಕ್ಷಣ ಎಂದು ಬಣ್ಣಿಸಿದ್ದಾರೆ.

********

ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ, ನಿಮ್ಹಾನ್ಸ್‌ನ ಮಾನಸಿಕ ಆರೋಗ್ಯ ಶಿಕ್ಷಣ, ಮನೋವೈದ್ಯಕೀಯ ಸಾಮಾಜಿಕ ಕಾರ್ಯ ಮತ್ತು ಕ್ಲಿನಿಕಲ್ ಸೈಕೋಫಾರ್ಮಕಾಲಜಿ ಹಾಗೂ ನ್ಯೂರೋಟಾಕ್ಸಿಕಾಲಜಿ ವಿಭಾಗಗಳು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿಂದು ಸಮುದಾಯ ಸಂಪರ್ಕ ೨೦೨೫ರ ಎರಡನೇ ಅಧಿವೇಶನ ನಡೆಯಿತು. 'ಡಿಸ್‌ಕನೆಕ್ಟ್ ಟು ರಿಕನೆಕ್ಟ್: ಫೈಂಡಿಂಗ್ ಬ್ಯಾಲೆನ್ಸ್ ಇನ್ ಎ ಡಿಜಿಟಲ್ ವರ್ಲ್ಡ್' ಎಂಬ ವಿಷಯದ ಕಾರ್ಯಕ್ರಮವು ಡಿಜಿಟಲ್ ಅತಿಯಾದ ಬಳಕೆಯ ಹೆಚ್ಚುತ್ತಿರುವ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ತಂತ್ರಜ್ಞಾನದೊಂದಿಗೆ ಆರೋಗ್ಯಕರ ಸಂಬಂಧಗಳನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ಈ ಕುರಿತು ನಿಮ್ಹಾನ್ಸ್‌ನ ಸೆಂಟರ್ ಫಾರ್ ವೆಲ್-ಬೀಯಿಂಗ್‌ನ ಕ್ಲಿನಿಕಲ್ ಸೈಕಾಲಜಿ ಪ್ರಾಧ್ಯಾಪಕ ಡಾ. ಮನೋಜ್ ಕುಮಾರ್ ಶರ್ಮಾ ಮಾಹಿತಿ ನೀಡಿದರು. ಮುಂದಿನ ಸಮುದಾಯ ಸಂಪರ್ಕ ಕಾರ್ಯಕ್ರಮವು ಇದೇ ಸೆಪ್ಟೆಂಬರ್ ೨೦ರಂದು ಲಾಲ್‌ಬಾಗ್‌ನಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನದ ವಿಷಯವಾಗಿ ನಡೆಯಲಿದೆ.

********

ಭಾರತ-ಅಮೆರಿಕ ವ್ಯಾಪಾರಗಳ ನಡುವಿನ ಮಾತುಕತೆಗಳು ಇನ್ನೂ ನಡೆಯುತ್ತಿವೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ಎಕನಾಮಿಕ್ ಟೈಮ್ಸ್ ವಿಶ್ವ ನಾಯಕರ ವೇದಿಕೆಯಲ್ಲಿ ಮಾತನಾಡಿದ ಅವರು, ದೇಶದ ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ. ಅಮೆರಿಕ ಜೊತೆಗಿನ ಮಾತುಕತೆಗಳಲ್ಲಿ ಭಾರತವು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಸರ್ಕಾರವು ಸ್ವಾವಲಂಬನೆ ಆತ್ಮನಿರ್ಭರತೆಗೆ ವಿಶೇಷ ಒತ್ತು ನೀಡುತ್ತಿದ್ದು, ಇತ್ತೀಚಿನ ಅನುಭವವು ಒಂದೇ ಪೂರೈಕೆ ಸರಪಳಿ ಅಥವಾ ಒಂದೇ ದೇಶ ಮೂಲದ ಮೇಲೆ ಅತಿಯಾಗಿ ಅವಲಂಬಿತರಾಗಬಾರದು ಎಂಬುದನ್ನು ಕಲಿಸಿದೆ ಎಂದು ಅವರು ಹೇಳಿದರು.

********

ಮಾಹಿತಿ ಸಚಿವಾಲಯದ ಅಡಿಯಲ್ಲಿರುವ ಅಂಚೆ ಇಲಾಖೆಯು ಆಗಸ್ಟ್ ೨೫ರಿಂದ ಅಮೆರಿಕಾಗೆ ಎಲ್ಲಾ ಅಂಚೆ ವಸ್ತುಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ನಿರ್ಧರಿಸಿದೆ. ಈ ತಿಂಗಳ ೨೯ರಿಂದ ಜಾರಿಗೆ ಬರುವಂತೆ ೮೦೦ ಡಾಲರ್ ವರೆಗಿನ ಸರಕುಗಳಿಗೆ ಸುಂಕ ಮುಕ್ತ ವಿನಾಯಿತಿಯನ್ನು ಹಿಂತೆಗೆದುಕೊಳ್ಳುವ ಅಮೆರಿಕ ಸರ್ಕಾರದ ಕಾರ್ಯಕಾರಿ ಆದೇಶದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಮೆರಿಕಗೆ ಉದ್ದೇಶಿಸಲಾದ ಎಲ್ಲಾ ಅಂತಾರಾಷ್ಟ್ರೀಯ ಅಂಚೆ ವಸ್ತುಗಳು, ಅವುಗಳ ಮೌಲ್ಯವನ್ನು ಲೆಕ್ಕಿಸದೆ ಕಸ್ಟಮ್ಸ್ ಸುಂಕಗಳಿಗೆ ಒಳಪಟ್ಟಿರುತ್ತವೆ ಎಂದು ಮಾಹಿತಿ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ ಹಾಗೂ ನೂರು ಡಾಲರ್ ವರೆಗಿನ ವಸ್ತುಗಳಿಗೆ ಸುಂಕಗಳಿಂದ ವಿನಾಯಿತಿ ಇರಲಿದೆ. ಅಂಚೆ ಇಲಾಖೆಯು ಸಾಧ್ಯವಾದಷ್ಟು ಬೇಗ ಸೇವೆಗಳನ್ನು ಸಾಮಾನ್ಯಗೊಳಿಸಲು ಪ್ರಯತ್ನವನ್ನು ಮಾಡುತ್ತಿದೆ. ಈ ಸಂದರ್ಭಗಳಿಂದಾಗಿ ಅಮೆರಿಕಾಗೆ ರವಾನಿಸಲಾದ ವಸ್ತುಗಳನ್ನು ಈಗಾಗಲೇ ಬುಕ್ ಮಾಡಿದ ಗ್ರಾಹಕರು ಅಂಚೆಯ ಮರುಪಾವತಿಯನ್ನು ಪಡೆಯಬಹುದು ಮತ್ತು ಗ್ರಾಹಕರಿಗೆ ಉಂಟಾದ ಅನಾನುಕೂಲತೆಗೆ ಅಂಚೆ ಇಲಾಖೆ ವಿಷಾದ ವ್ಯಕ್ತಪಡಿಸಿದೆ.

********

ಯುಎಸ್-ಎಫ್‌ಡಿಎ ಅನುಮೋದಿತ ಕೂಲ್‌ಸ್ಕಲ್ಪ್ಟಿಂಗ್ ಕಾರ್ಯವಿಧಾನದ ಮೂಲಕ ಕೊಬ್ಬು ನಷ್ಟ ಮತ್ತು ಸ್ಲಿಮ್ಮಿಂಗ್ ಚಿಕಿತ್ಸೆಗಳ ಕುರಿತು ತಪ್ಪುದಾರಿ ಗೆಳೆಯುವ ಜಾಹೀರಾತುಗಳನ್ನು ಪ್ರಕಟಿಸಿದ್ದಕ್ಕಾಗಿ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ - ಸಿಸಿಪಿಎ ಸೌಂದರ್ಯ, ಕ್ಷೇಮ ಮತ್ತು ವೈಯಕ್ತಿಕ ಆರೈಕೆ ಬ್ರ್ಯಾಂಡ್‌ಗೆ ೩ ಲಕ್ಷ ರೂಪಾಯಿ ದಂಡ ವಿಧಿಸಿದೆ. ತೂಕ ಇಳಿಕೆಯ ಸುಳ್ಳು ಭರವಸೆ ನೀಡುವ ಮತ್ತು ದೇಹದಾದ್ಯಂತ ಕೊಬ್ಬು ನಷ್ಟವನ್ನು ಸೂಚಿಸುವ, ಮೊದಲು ಮತ್ತು ನಂತರ ಎಂಬ ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ಸಿಸಿಪಿಎ ಗಮನಕ್ಕೆ ತೆಗೆದುಕೊಂಡಿತು. ಈ ಜಾಹೀರಾತುಗಳು ಗ್ರಾಹಕರ ದಾರಿತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯವು ಹೇಳಿದ್ದು, ಗ್ರಾಹಕರು ಜಾಗರೂಕರಾಗಿರಿ ಮತ್ತು ಕೂಲ್‌ಸ್ಕಲ್ಪ್ಟಿಂಗ್ ಮೂಲಕ ತ್ವರಿತ ತೂಕ ನಷ್ಟ ಭರವಸೆ ನೀಡುವ ಜಾಹೀರಾತುಗಳಿಗೆ ಬಲಿಯಾಗದಂತೆ ಸಲಹೆ ನೀಡಿದೆ.

********

ಕಜಕಿಸ್ತಾನ್‌ನ ಶಿಮ್ಕೆಂಟ್‌ನಲ್ಲಿ ನಡೆದ ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಅರ್ಜುನ್ ಬಾಬುಟಾ ಮತ್ತು ಎಲವೆನಿಲ್ ವಲರಿವನ್ ೧೦ ಮೀಟರ್ ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.ಭಾರತೀಯ ಜೋಡಿ ಫೈನಲ್‌ನಲ್ಲಿ ಚೀನಾದ ಡಿಂಗ್ಕೆ ಲು ಮತ್ತು ಕ್ಸಿನ್ಲು ಪೆಂಗ್ ಅವರನ್ನು ೧೭-೧೧ ಅಂತರದಿಂದ ಸೋಲಿಸಿತು . ಈಗಾಗಲೇ ಮಹಿಳೆಯರ ೧೦ ಮೀಟರ್ ಏರ್ ರೈಫಲ್ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿರುವ ಎಲವೆನಿಲ್ ವಲರಿವನ್‌ಗೆ ಇದು ಚಾಂಪಿಯನ್‌ಶಿಪ್‌ನಲ್ಲಿ ದೊರೆತ ಎರಡನೇ ಚಿನ್ನದ ಪದಕವಾಗಿದೆ. ಭಾರತ ೨೧ ಚಿನ್ನ, ಎಂಟು ಬೆಳ್ಳಿ ಮತ್ತು ಹತ್ತು ಕಂಚಿನ ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

***END***